e-mail registrar@Uni-mysore-ac-in

ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್. 0821-3419363/24193011

www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/138/2022-23

ದಿನಾಂಕ 15-10-2022

"ಪ್ರಮಾಣಿತ ಅಂಚೆ ಮೂಲಕ"

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 23-09-2022ರಂದು ನಡೆದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ:23-09-2022ರಂದು ಬೆಳಗ್ಗೆ 11-30 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ, ಲಲಿತ ಕಲಾ ಕಾಲೇಜಿನ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ದಾಖಲಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ದಾಖಲಿಸಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ. ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 08-11-2022ರ ಒಳಗಾಗಿ, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ,

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲಾ ಕಾಲೇಜಿನ ಸಭಾಂಗಣದಲ್ಲಿ ದಿನಾಂಕ: 23.09.2022 ರಂದು ಪೂರ್ವಾಹ್ನ 11.30 ಗಂಟೆಗೆ ನಡೆದ ವಿದ್ಯಾವಿಷಯಕ ಪರಿಷತ್ ಎರಡನೇ ಸಾಮಾನ್ಯ ಸಭೆಯ ನಡವಳಿಗಳು.**

**<u>ಸಭೆಗೆ ಹಾಜರಾಗಿದ್ದ ಸದಸ್ಯರುಗಳು:</u>**

1. ಪ್ರೊ.ಜಿ.ಹೇಮಂತ್‌ಕುಮಾರ್, ಕುಲಪತಿಗಳು – ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಡಾ.ಗಿರಿಧರ್ ರಾವ್.ಎಂ.ಎಸ್ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. – ಸದಸ್ಯರು
3. ಡಾ. ಜಿ.ಗೋವಿಂದರಾಜು – ಸದಸ್ಯರು
4. ಡಾ. ನಿರ್ಮಲ.ಹೆಚ್.ಎಂ – ಸದಸ್ಯರು
5. ಡಾ. ವೆಂಕಟೇಶಯ್ಯ – ಸದಸ್ಯರು
6. ಶ್ರೀ ಹೆಚ್.ಎಸ್.ಗಂಗೇಗೌಡ – ಸದಸ್ಯರು
7. ಡಾ. ಜಯಶಂಕರ್.ಎನ್ – ಸದಸ್ಯರು
8. ಪ್ರೊ. ಸೌಮ್ಯ ಈರಪ್ಪ.ಕೆ – ಸದಸ್ಯರು
9. ಶ್ರೀ ನಂದೀಶ್.ಎಸ್ – ಸದಸ್ಯರು
10. ಶ್ರೀ ಟಿ.ನಾಗರಾಜು – ಸದಸ್ಯರು
11. ಡಾ. ಪ್ರಶಾಂತ್.ಎಸ್.ಟಿ – ಸದಸ್ಯರು
12. ಪ್ರೊ. ಕೆ.ವಿ.ಅಯ್ಯಣ್ಣ – ಸದಸ್ಯರು
13. ಶ್ರೀ ಹೆಚ್.ಪಿ.ಶಶಿಕುಮಾರ್ – ಸದಸ್ಯರು
14. ಶ್ರೀ ಶಿವಕುಮಾರ್.ಎಂ – ಸದಸ್ಯರು
15. ಶ್ರೀ ಎಂ.ಸಿ.ರಾಜಶೇಖರ್ – ಸದಸ್ಯರು
16. ಪ್ರೊ. ಮುಜಾಫರ್ ಹೆಚ್ ಅಸ್ಸಾದಿ – ಸದಸ್ಯರು
17. ಪ್ರೊ. ಹೆಚ್.ಟಿ.ಬಸವರಾಜಪ್ಪ – ಸದಸ್ಯರು
18. ಪ್ರೊ. ಟಿ.ಆರ್.ಮಾರುತಿ – ಸದಸ್ಯರು
19. ಪ್ರೊ. ಎಸ್.ಮದಿಅಳಗನ್ – ಸದಸ್ಯರು
20. ಪ್ರೊ. ಬಿ.ಶಂಕರ್ – ಸದಸ್ಯರು
21. ಪ್ರೊ. ವೈ.ಬಿ.ಬಸವರಾಜು – ಸದಸ್ಯರು
22. ಡಾ. ಮಲ್ಲಿನಾಥ್ ಕುಂಬಾರ್ – ಸದಸ್ಯರು
23. ಪ್ರೊ. ಎಂ.ಎಸ್.ಶೇಖರ್ – ಸದಸ್ಯರು
24. ಪ್ರೊ. ಜಿ.ಆರ್.ಜನಾರ್ಧನ – ಸದಸ್ಯರು
25. ಡಾ. ಸರಸ್ವತಿ, ಗ್ರಂಥಪಾಲಕರು – ಸದಸ್ಯರು
26. ಪ್ರೊ. ಗುರುಸಿದ್ದಯ್ಯ, ನಿರ್ದೇಶಕರು (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ – ಸದಸ್ಯರು
27. ಪ್ರೊ. ಎನ್.ಕೆ.ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ ಹಾಗೂ ನಿರ್ದೇಶಕರು (ಪ್ರಭಾರ). ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
28. ಡಾ. ಕೃಷ್ಣಯ್ಯ, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ – ಸದಸ್ಯರು
29. ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವ (ಪರೀಕ್ಷಾಂಗ) – ಸದಸ್ಯರು
30. ಡಾ. ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿ – ಸದಸ್ಯರು
31. ಕುಮಾರಿ ಅನುಷಾ.ಪಿ.ಜಿ
32. ಕುಮಾರಿ ಮುಸ್ಕನ್ ಭಾನು
33. ಶ್ರೀ ರೋಹನ್.ವಿ
34. ಕುಮಾರಿ ಅನು.ಎಸ್.ಜೆ
35. ಶ್ರೀ ಉದಯ್.ಎಂ.ಎಲ್
36. ಪ್ರೊ. ಆರ್. ಶಿವಪ್ಪ. – ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ

**ಸಭೆಯಲ್ಲಿ ಗೈರುಹಾಜರಾಗಿದ್ದವರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಶ್ರೀ ಸಿ.ಎಸ್.ನಿರಂಜನ್ ಕುಮಾರ್, ವಿಧಾನ ಸಭಾ ಸದಸ್ಯರು
3. ಶ್ರೀ ಪ್ರೀತಂ ಜೆ ಗೌಡ, ವಿಧಾನ ಸಭಾ ಸದಸ್ಯರು
4. ಶ್ರೀ ಎಂ.ಶ್ರೀನಿವಾಸ್, ವಿಧಾನ ಸಭಾ ಸದಸ್ಯರು
5. ಶ್ರೀ ಎಲ್.ನಾಗೇಂದ್ರ, ವಿಧಾನ ಸಭಾ ಸದಸ್ಯರು
6. ಶ್ರೀಸಿ.ಎನ್. ಮಂಚೇಗೌಡ, ವಿಧಾನ ಪರಿಷತ್ ಸದಸ್ಯರು
7. ಶ್ರೀ ಎಂ.ಪಿ.ಕುಶಾಲಪ್ಪ, ವಿಧಾನ ಪರಿಷತ್ ಸದಸ್ಯರು
8. ಶ್ರೀಮತಿ ನಾಗರತ್ನಮ್ಮ.ಕೆ
9. ಡಾ.ಭಾಗ್ಯಲಕ್ಷ್ಮಿ
10. ಡಾ.ಬಿಂದು ಅನಿಲ್ ಥಾಮಸ್
11. ಶ್ರೀ ಎಂ.ಪವನ್ ಕುಮಾರ್

ಮೊದಲಿಗೆ ಮಾನ್ಯ ಕುಲಸಚಿವರು ಮಾತನಾಡಿ ಶಿಕ್ಷಣ ಮಂಡಳ ಎರಡನೇ ಸಾಮಾನ್ಯ ಸಭೆಗೆ ಹಾಜರಾಗಿರುವ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮುಂದುವರಿದು ಮಾನ್ಯ ಕುಲಸಚಿವರು, ಹೊಸದಾಗಿ ಶಿಕ್ಷಣ ಮಂಡಳ ಸದಸ್ಯರಾಗಿ ನೇಮಕಗೊಂಡಿರುವ ಈ ಕೆಳಕಂಡ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಿದರು.

1. ಡಾ. ಮಲ್ಲಿನಾಥ್ ಕುಂಬಾರ್, ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಹಾಗೂ

ಇದುವರೆವಿಗೂ ಶಿಕ್ಷಣ ಮಂಡಳ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಡಾ.ಎಂ.ಜಿ.ಮಂಜುನಾಥ್, ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ.
2. ಪ್ರೊ.ಕೆ.ವಿ.ಸುರೇಶ್, ಪ್ರಾಂಶುಪಾಲರು, ಜೆ.ಎಸ್.ಎಸ್. ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು.

ತದನಂತರ ಮಾನ್ಯ ಕುಲಪತಿಯವರು ಎಲ್ಲಾರನ್ನು ಮತ್ತೊಮ್ಮೆ ಸ್ವಾಗತಿಸುತ್ತಾ ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | ದಿನಾಂಕ:30-06-2022ರಂದು ಜರುಗಿದ ಶಿಕ್ಷಣ ಮಂಡಳ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ: 30-06-2022ರಂದು ಜರುಗಿದ ಶಿಕ್ಷಣ ಮಂಡಳ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು. |
| II.1 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದಲ್ಲಿ ನಾಲ್ಕನೇ ಚಾತುರ್ಮಾಸದ ವಿದ್ಯಾರ್ಥಿಗಳ ಹಾಜರಾತಿಯ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದಲ್ಲಿ ನಾಲ್ಕನೇ ಚಾತುರ್ಮಾಸದ 9 ವಿದ್ಯಾರ್ಥಿಗಳ ಹಾಜರಾತಿ ಕನಿಷ್ಠ ಶೇ. 75 ರಷ್ಟು ಕಡಿಮೆ ಇದ್ದು, ಹಾಗೂ ನಿಯಮಾನುಸಾರ ನಿಗದಿಯಾದಂತೆ ತರಗತಿಗಳನ್ನು ತಗೆದುಕೊಂಡಿಲ್ಲದ ಕಾರಣದಿಂದಾಗಿ, ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಇವರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ, ಸದರಿ ಸಮಿತಿ ಶಿಫಾರಸಿನ ಆಧಾರ ಮೇಲೆ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ನಾಲ್ಕನೇ ಸೆಮಿಸ್ಟರ್ ಪರೀಕ್ಷೆ ಬರೆಯಲು ಅವಕಾಶ ನೀಡಿರುವುದಾಗಿ ಸಭೆಯ ಗಮನಕ್ಕೆ ತಂದರು. |

**ಶ್ರೀ ಹೆಚ್.ಪಿ.ಶಶಿಕುಮಾರ್** ಅವರು ಮಾತನಾಡಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದಲ್ಲಿ ನಾಲ್ಕನೇ ಚಾತುರ್ಮಾಸದ 9 ವಿದ್ಯಾರ್ಥಿಗಳ ಹಾಜರಾತಿ ಪ್ರಮಾಣವು ಶೇ.75ಕ್ಕಿಂತ ಕಡಿಮೆ ಇದ್ದರೂ ಸಹ ಪರೀಕ್ಷೆ ಬರೆಯಲು ಅವಕಾಶ ಕಲ್ಪಸಿರುವುದ ಸರಿಯಷ್ಟೆ. ಆದರೆ ಎಲ್ಲಾ ಪತ್ರಿಕೆಗಳ ಪರೀಕ್ಷೆಗಳು ಪೂರ್ಣಗೊಂಡ ನಂತರ ಶಿಕ್ಷಣ ಮಂಡಳ ಸಭೆಗೆ ಅನುಸಮರ್ಥನೆಗಾಗಿ ಮಂಡಿಸಿರುವುದು ಸೂಕ್ತವಲ್ಲವೆಂದು ಆಕ್ಷೇಪಣೆ ವ್ಯಕ್ತಪಡಿಸಿದರು. ಮುಂದುವರೆದು ವಿಶ್ವವಿದ್ಯಾನಿಲಯದ ನಿಯಮಾವಳ 6.4 ರಲ್ಲಿ ಪ್ರತಿ ಪತ್ರಿಕೆಯಲ್ಲೂ ಕನಿಷ್ಠ ಶೇ.75 ರಷ್ಟು ಹಾಜರಾತಿ ಕಡ್ಡಾಯವಾಗಿ ಹೊಂದಿರಬೇಕೆಂದು ನಿಯಮವಿದ್ದರೂ ಸಹ ಯಾವ ಆಧಾರದ ಮೇಲೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡುವುದು ಹಾಗೂ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರುಗಳ ಮೇಲೆ ಕ್ರಮಜರುಗಿಸುವಂತೆ ತಿಳಿಸಿದರು.

ಮುಂದುವರೆದು ಮಾತನಾಡಿ ಇನ್ನುಮುಂದೆ ವಿದ್ಯಾರ್ಥಿಗಳ ಹಾಜರಾತಿಯನ್ನು ಪ್ರತಿ ತಿಂಗಳು ವಿಭಾಗದ ಸೂಚನ ಫಲಕದಲ್ಲಿ ಪ್ರತಿ ಪತ್ರಿಕೆಗಳ ಹಾಜರಾತಿಯನ್ನು ನಮೂದಿಸುವುದು ಹಾಗೂ ವಿಶ್ವವಿದ್ಯಾನಿಲಯಕ್ಕೆ ಮಾಹಿತಿ ನೀಡಲು ಕಡ್ಡಾಯವಾಗಿರುತ್ತದೆ. ಶೇ.75 ಕ್ಕಿಂತ ಕಡಿಮೆ ಹಾಜರಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ಮಾನವಿಯತೆ ದೃಷ್ಠಿಯಿಂದ ಪರೀಕ್ಷೆ ಬರೆಯಲು ಅವಕಾಶ ಕೊಟ್ಟರೆ ಪ್ರಾಮಾಣಿಕವಾಗಿ ಎಲ್ಲಾ ತರಗತಿಗಳಗೂ ಹಾಜರಾಗುವ ವಿದ್ಯಾರ್ಥಿಗಳಿಗೆ ವಂಚಿಸಿದಂತೆ ಆಗುತ್ತದೆ. ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಆಯಾಯ ವಿಭಾಗದ ಮುಖ್ಯಸ್ಥರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ವಿಶ್ವವಿದ್ಯಾನಿಲಯವು ಶಿಸ್ತು ಕ್ರಮ ಜರುಗಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.

ಈ ಪ್ರಸ್ತಾವನೆಗೆ ಮಾನ್ಯ ಕುಲಪತಿಯವರು ಮಾತನಾಡಿ ವಿಶ್ವವಿದ್ಯಾನಿಲಯದ ವತಿಯಿಂದ ಹಲವಾರು ಬಾರಿ ಹಾಜರಾತಿಗೆ ಸಂಬಂಧಿಸಿದಂತೆ ಪ್ರತಿ ಪತ್ರಿಕೆಯಲ್ಲೂ ಕನಿಷ್ಠ ಶೇ.75 ರಷ್ಟು ಹಾಜರಾತಿ ಕಡ್ಡಾಯವಾಗಿ ಹೊಂದಿರಬೇಕೆಂದು ಹಾಗೂ ಈ ಮಾಹಿತಿಯನ್ನು ಅಧ್ಯಯನ ವಿಭಾಗದ ಡಿ.ಸಿ ಮಿಟಿಂಗ್‌ನಲ್ಲಿ (Department Council) ಮುಂದೆ ಮಂಡಿಸಬೇಕೆಂದು, ಇದರ ಆಧಾರದ ಮೇಲೆ ವಿಭಾಗದ ಸೂಚನಾ ಫಲಕದ ಮೂಲಕ ವಿದ್ಯಾರ್ಥಿಗಳ ಗಮನಕ್ಕೆ ತಂದು, ಅದರ ಪ್ರತಿಯನ್ನು ಕುಲಸಚಿವ ಮತ್ತು ಕುಲಸಚಿವ (ಪರೀಕ್ಷಾಂಗ)ರವರ ಕಛೇರಿಗೆ ಸಲ್ಲಿಸಬೇಕೆಂದು ಸುತ್ತೋಲೆಯನ್ನು ಎಲ್ಲಾ ವಿಭಾಗ/ಕೇಂದ್ರ/ಕಾಲೇಜುಗಳಗೂ ಹೊರಡಿಸಲಾಗಿದೆ. ಕೆಲವು ವಿಭಾಗದ ಮುಖ್ಯಸ್ಥರು ಕ್ರೋಢಿಕೃತ ಶೇಕಡವಾರು ಹಾಜರಾತಿಯ ಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಕೆಲವು ವಿದ್ಯಾರ್ಥಿಗಳು 1-2 ಪತ್ರಿಕೆಗಳಲ್ಲಿ ಒಂದೆರಡು ಅಂಕಗಳಿಂದ ಶೇ.75 ರಷ್ಟು ಹಾಜರಾತಿಯ ಪ್ರಮಾಣದಲ್ಲಿ ಕಡಿಮೆ ಇರುವುದು ಕಂಡು ಬಂದಿರುತ್ತದೆ. ಅಂತಹ ಸಂದರ್ಭದಲ್ಲಿ ವಿದಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಮುಂದಿನ ಶೈಕ್ಷಣಿಕ ವರ್ಷದಿಂದ ಹಾಜರಾತಿಯ ಬಗ್ಗೆ ಗಂಭೀರವಾಗಿ ಪರಿಗಣಿಸಿ ಶೇ. 75 ಕ್ಕಿಂತ ಕಡಿಮೆ ಹಾಜರಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡುವುದಿಲ್ಲ ಹಾಗೂ ಪ್ರತಿ ತಿಂಗಳು ಸೂಚನ ಫಲಕದಲ್ಲಿ ಪ್ರತಿ ಪತ್ರಿಕೆಯ ಹಾಜರಾತಿ ಪಟ್ಟಿಯನ್ನು ಪ್ರಕಟಿಸದ ವಿಭಾಗದ ಮುಖ್ಯಸ್ಥರ ಮೇಲೆ ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು,

ಪ್ರೊ. ಕೆ.ವಿ.ಅಯ್ಯಣ್ಣ ರವರು ಮಾತನಾಡಿ ಕನಿಷ್ಠ ಶೇ.75 ರಷ್ಟು ಹಾಜರಾತಿ ಕಡ್ಡಾಯವಾಗಿ ಹೊಂದಿರಬೇಕೆಂದು ಹಾಗೂ ಹಾಜರಾತಿ ಪಟ್ಟಿಯನ್ನು ಸಂಬಂಧಪಟ್ಟ ಅಧ್ಯಾಪಕರು ಪ್ರತಿ ತಿಂಗಳು ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಬೇಕೆಂದು ಹಾಗೂ ಇದು ಅವರ ಜವಾಬ್ಧಾರಿಯಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

| | |
|---|---|
| | ಪ್ರೊ. ಹೆಚ್. ರಾಜಶೇಖರ್, ಡೀನರು, ವಾಣಿಜ್ಯ ನಿಕಾಯ ಇವರು ಮಾತನಾಡಿ ಈ ವಿಷಯವು ಬಹಳ ಗಂಭೀರವಾಗಿದ್ದು, ಇದನ್ನು ಗಂಭೀರವೆಂದು ಪರಿಗಣಿಸಿ ಸಿ.ಬಿ.ಸಿ.ಎಸ್ (Continuous Assessment Programme)ನಲ್ಲಿ ತಿಳಿಸಿರುವಂತೆ ಯಾವುದೇ ವಿದ್ಯಾರ್ಥಿಯ ಹಾಜರಾತಿ ಕಡಿಮೆ ಇದ್ದಲ್ಲಿ ಅಧ್ಯಾಪಕರು ಅವರಿಗೆ ವಿಶೇಷ ತರಗತಿಗಳನ್ನು ನಡೆಸಿ ಶೇ.75 ಹಾಜರಾತಿ ಬರುವಂತೆ ಮಾಡುವ ಜವಾಬ್ಧಾರಿ ಅಧ್ಯಾಪಕರ ಕರ್ತವ್ಯವಾಗಿರುತ್ತದೆ ಎಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ ಈ ಸಂಬಂಧ ಆಗಿರುವ ಲೋಪಕ್ಕೆ ಸಮಿತಿಯನ್ನು ರಚಿಸಿ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು. |
| ತೀರ್ಮಾನ | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ಸ್ನಾತಕೋತ್ತರ ನಾಲ್ಕನೇ ಚಾತುರ್ಮಾಸದ ಶೇ 75 ಕ್ಕಿಂತ ಕಡಿಮೆ ಹಾಜರಾತಿ ಹೊಂದಿರುವ 09 ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಿರುವುದನ್ನು ಶಿಕ್ಷಣ ಮಂಡಳಿ ಸಭೆಯು ಅನುಸಮರ್ಥಿಸಿತು, ಹಾಗೂ ಮುಂದಿನ ಶೈಕ್ಷಣಿಕ ವರ್ಷದಿಂದ ಹಾಜರಾತಿಯನ್ನು ಗಂಭೀರವಾಗಿ ಪರಿಗಣಿಸಿ ನಿಯಮಾನುಸಾರ ಶೇ. 75 ಕ್ಕಿಂತ ಕಡಿಮೆ ಹಾಜರಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡದಿರಲು ಹಾಗೂ ಪ್ರತಿ ತಿಂಗಳು ವಿಭಾಗದ ಸೂಚನ ಫಲಕದಲ್ಲಿ ಹಾಜರಾತಿಯನ್ನು ಕಡ್ಡಾಯವಾಗಿ ಪ್ರಕಟಿಸಬೇಕು ಪ್ರತಿ ಪತ್ರಿಕೆಯ ಹಾಜರಾತಿ ಪಟ್ಟಿಯನ್ನು ಪ್ರಕಟಿಸದ ವಿಭಾಗದ ಮುಖ್ಯಸ್ಥರ ಮೇಲೆ ಕ್ರಮ ಜರುಗಿಸಲು ಸಭೆಯು ತೀರ್ಮಾನಿಸಿತು. |
| II.2 | "ಪ್ರೊ. ಎನ್. ಲಕ್ಷ್ಮೀದೇವಿ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೆ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೆ.80ರಷ್ಟು ಬಡ್ಡಿ ಹಣವನ್ನು M.Sc in Microbiology ಪದವಿ ಪರೀಕ್ಷೆಯಲ್ಲಿ ಅಧ್ಯಯನ ಮಾಡಿ, ಮೊದಲನೇ ಬಾರಿಗೆ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕ ನೀಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಪ್ರೊ. ಎನ್. ಲಕ್ಷ್ಮೀದೇವಿ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡಲು ಸಭೆಯು ಅನುಮೋದಿಸಿತು. |
| II.3 | 2018-19ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ. |
| ತೀರ್ಮಾನ | 2018-19ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ ತರಾತುರಿಯಲ್ಲಿ ಮಂಡಿಸಿದ್ದಕ್ಕೆ ಶಿಕ್ಷಣ ಮಂಡಳಿಯ ಸದಸ್ಯರಾದ ಶ್ರೀ ಹೆಚ್.ಪಿ.ಶಶಿಕುಮಾರ್‌ರವರು ಆಕ್ಷೇಪಣೆ ವ್ಯಕ್ತಪಡಿಸಿದುದರಿಂದ ಈ ವಿಷಯವನ್ನು ಮುಂದೂಡಲಾಯಿತು. |
| II.4 | ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಯ ಸ್ಥಾಪನೆಯ ಸಂಬಂಧ ಕರಡು ಅಧಿನಿಯಮಕ್ಕೆ ಅನಮೋದನೆ ಬಗ್ಗೆ. |
| ತೀರ್ಮಾನ | ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಯ ಸ್ಥಾಪನೆಯ ಸಂಬಂಧ ಕರಡು ಅಧಿನಿಯಮವನ್ನು ಸರ್ಕಾರದ ಅನುಮೋದನೆಗೆ ಕಳುಹಿಸಲು ಸಭೆಯು ತೀರ್ಮಾನಿಸಿತು. |
| II.5 | 2017 ಪಿಹೆಚ್.ಡಿ ನಿಯಮಾವಳಿಯ ತಿದ್ದುಪಡಿ ಬಗ್ಗೆ. |
| | ಪ್ರೊ. ಎ.ಪಿ. ಜ್ಞಾನ ಪ್ರಕಾಶ್, ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ 2017ರ ಪಿಹೆಚ್.ಡಿ ನಿಯಾಮಾವಳಿಯನ್ನು ಬದಲಾವಣೆ ಮಾಡಲು ಸಮಿತಿಯನ್ನು ರಚಿಸಿ ಇದಕ್ಕೆ ಸಂಬಂಧಿಸಿದಂತೆ ಹಲವಾರು ಸಭೆಗಳನ್ನು ನಡೆಸಿ ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಪಿಹೆಚ್.ಡಿ ನಿಯಾಮಾವಳಿಗೆ ತಿದ್ದುಪಡಿ ಮಾಡಿರುವ ಕರಡು ನಿಯಮವನ್ನು ಶಿಕ್ಷಣ ಮಂಡಳಿ ಸಭೆಯ ಅನುಮೋದನೆಗೆ ಮಂಡಿಸಿರುವುದಾಗಿ ತಿಳಿಸಿದರು. |

| | |
|---|---|
| | ಪ್ರೊ. ಹೆಚ್. ರಾಜಶೇಖರ್, ಡೀನರು, ವಾಣಿಜ್ಯ ನಿಕಾಯ, ಇವರು ಮಾತನಾಡಿ ಖಾಸಗಿ ಸಂಶೋಧನ ಕೇಂದ್ರಗಳು ಕಟ್ಟುನಿಟ್ಟಾಗಿ ಯುಜಿಸಿ, ವಿಶ್ವವಿದ್ಯಾನಿಲಯ ನಿಯಮವನ್ನು ಪಾಲಿಸುತ್ತಿಲ್ಲ. ಹಾಗೂ ಕೆಲವು ಕಾಲೇಜಿನ ಅತಿಥಿ ಉಪನ್ಯಾಸಕರನ್ನು ನೇರವಾಗಿ ಪ್ರಾಧ್ಯಾಪಕರೆಂದು ನೇಮಕ ಮಾಡಿಕೊಂಡಿರುತ್ತಾರೆ ಅವರ ಅರ್ಹತೆ, ಭೋಧನ ಅನುಭವ ಅವರು ಮಾರ್ಗದರ್ಶಕರಾಗಲು ಅರ್ಹರಾಗಿದ್ದಾರೆಯೇ, ವೇತನವನ್ನು ಬ್ಯಾಂಕ್ ಖಾತೆಗೆ ಪಾವತಿಸುತ್ತಿದ್ದಾರ, ವೇತನ ಸೌಲಭ್ಯವನ್ನು ನೀಡುತ್ತಿದ್ದಾರ ಎಂದು ಪರೀಕ್ಷಿಸಿ ಆ ಕೇಂದ್ರಗಳಿಗೆ ಸಂಶೋಧನ ಕೇಂದ್ರದ ಮಾನ್ಯತೆಯನ್ನು ನೀಡಬೇಕೆಂದು ಸಲಹೆ ನೀಡಿದರು. |
| ತೀರ್ಮಾನ | 2017ರ ಪಿಹೆಚ್.ಡಿ ನಿಯಾಮಾವಳಿಗೆ ತಿದ್ದುಪಡಿ ಮಾಡಿರುವುದನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |
| II.6 | ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಸಂಬಂಧ ಕರಡು ಅಧಿನಿಯಮವನ್ನು ಅನುಮೋದಿಸುವ ಬಗ್ಗೆ. |
| | ಶ್ರೀ ಹೆಚ್.ಪಿ.ಶಶಿಕುಮಾರ್‌ರವರು ಮಾತನಾಡಿ ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತಿರುವ ಭೋದಕರಿಗೆ ಯಾವ ರೀತಿ ಸಂಬಳ ನೀಡುತ್ತಿದಿರಿ ಎಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ಸುಮಾರು 20 ವರ್ಷಗಳ ಕಾಲದಿಂದ ಕಾರ್ಯನಿರ್ವಹಿಸುತ್ತಿರುವ ಭೋದಕ ಸಿಂಬ್ಬದಿಗಳಿಗೆ ಯು.ಜಿ.ಸಿ ವತಿಯಿಂದ ಸಂಬಳ ನೀಡುತ್ತಿವುದರಿಂದ ಇವರುಗಳನ್ನು ಖಾಯಂಗೊಳಿಸುವ ಸಂಬಂಧ ಕರಡು ಅಧಿನಿಯವನ್ನು ಸಿದ್ಧಪಡಿಸಿದ್ದು ಸರ್ಕಾರದ ಅನುಮೋದನೆಗೆ ಕಳುಹಿಸಿಕೊಡಬೇಕಾಗಿದೆ ಇದಕ್ಕೆ ಸಭೆಯು ಅನುಮೋದನೆ ನೀಡುವಂತೆ ಕೋರಿದರು. |
| ತೀರ್ಮಾನ | ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಸಂಬಂಧ ಸಿದ್ಧಪಡಿಸಿರುವ ಕರಡು ಅಧಿನಿಯಮವನ್ನು ಸಭೆಯು ಅನುಮೋದಿಸಿತು. |
| III.1 | ದಿನಾಂಕ: 07-09-2022ರಂದು ನಡೆದಂತಹ ವಾಣಿಜ್ಯ ನಿಕಾಯದ ವಿಶೇಷ ಸಭೆಯ ನಡವಳಿಯ ಅನುಮೋದನೆ ಬಗ್ಗೆ. |
| | ಪ್ರೊ. ಹೆಚ್ ರಾಜಶೇಖರ್, ಡೀನರು ವಾಣಿಜ್ಯ ನಿಕಾಯ ಇವರು ಮಾತನಾಡಿ ದಿನಾಂಕ: 07-09-2022ರಂದು ನಡೆದಂತಹ ವಾಣಿಜ್ಯ ನಿಕಾಯದ ವಿಶೇಷ ಸಭೆಯು ಎನ್.ಇ.ಪಿ, ಪಠ್ಯಕ್ರಮಗಳಿಗೆ ಶಿಫಾರಸು ಮಾಡಿರುವುದನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದನೆ ನೀಡುವಂತೆ ಕೋರಿದರು. |
| ತೀರ್ಮಾನ | ದಿನಾಂಕ: 07-09-2022ರಂದು ನಡೆದಂತಹ ವಾಣಿಜ್ಯ ನಿಕಾಯದ ವಿಶೇಷ ಸಭೆಯ ನಡವಳಿಯನ್ನು ಸಭೆಯು ಅನುಮೋದಿಸಿತು. |
| III.2 | Specialized ಕೋರ್ಸ್‌ಗಳ ವಾಣಿಜ್ಯ ನಿಕಾಯದ ವಿಶೇಷ ಸಭೆಯ ಶಿಫಾರಸು ನಿರ್ಣಯಗಳ ಬಗ್ಗೆ. |
| ತೀರ್ಮಾನ | Specialized ಕೋರ್ಸ್‌ಗಳ ವಾಣಿಜ್ಯ ನಿಕಾಯದ ವಿಶೇಷ ಸಭೆಯ ಶಿಫಾರಸು ನಿರ್ಣಯಗಳನ್ನು ಸಭೆಯು ಅನುಮೋದಿಸಿತು. |
| III.3 | ದಿನಾಂಕ: 08-09-2022ರಂದು ನಡೆದಂತಹ ಕಲಾ ನಿಕಾಯದ ವಿಶೇಷ ಸಭೆಯ ನಡವಳಿಯ ಅನುಮೋದನೆ ಬಗ್ಗೆ. |
| | ಪ್ರೊ. ಮುಜಾಫರ್ ಹೆಚ್ ಅಸ್ಸಾದಿ, ಡೀನರು, ಕಲಾ ನಿಕಾಯ ಇವರು ಮಾತನಾಡಿ ದಿನಾಂಕ 08-09-2022ರಂದು ನಡೆದಂತಹ ಕಲಾ ನಿಕಾಯದ ವಿಶೇಷ ಸಭೆಯು ಎನ್.ಇ.ಪಿ, ಪಠ್ಯಕ್ರಮಗಳಿಗೆ ಶಿಫಾರಸು ಮಾಡಿರುವುದನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದನೆ ನೀಡುವಂತೆ ಕೋರಿದರು. |
| ತೀರ್ಮಾನ | ದಿನಾಂಕ: 08-09-2022ರಂದು ನಡೆದಂತಹ ಕಲಾ ನಿಕಾಯದ ವಿಶೇಷ ಸಭೆಯ ನಡವಳಿಯನ್ನು ಸಭೆಯು ಅನುಮೋದಿಸಿತು. |
| III.4 | Specialized ಕೋರ್ಸ್‌ಗಳ ಕಲಾ ನಿಕಾಯದ ವಿಶೇಷ ಸಭೆಯ ಶಿಫಾರಸು ನಿರ್ಣಯಗಳ ಬಗ್ಗೆ. |
| ತೀರ್ಮಾನ | Specialized ಕೋರ್ಸ್‌ಗಳ ಕಲಾ ನಿಕಾಯದ ವಿಶೇಷ ಸಭೆಯ ಶಿಫಾರಸು ನಿರ್ಣಯಗಳನ್ನು ಸಭೆಯು ಅನುಮೋದಿಸಿತು. |

| | |
|---|---|
| III.5 | ದಿನಾಂಕ 07-09-2022ರಂದು ನಡೆದಂತಹ ಶಿಕ್ಷಣ ನಿಕಾಯದ ವಿಶೇಷ ಸಭೆಯ ನಡವಳಿಯ ಅನುಮೋದನೆ ಬಗ್ಗೆ. |
| | ಪ್ರೊ. ಎಸ್. ಮದಿಅಳಗನ್, ಡೀನರು ಶಿಕ್ಷಣ ನಿಕಾಯ ಇವರು ಮಾತನಾಡಿ ದಿನಾಂಕ:07-09-2022ರ ಮಧ್ಯಾಹ್ನ ನಡೆದಂತಹ ಶಿಕ್ಷಣ ನಿಕಾಯದ ವಿಶೇಷ ಸಭೆಯು ಎನ್.ಇ.ಪಿ, ಪಠ್ಯಕ್ರಮಗಳಿಗೆ ಶಿಫಾರಸು ಮಾಡಿರುವುದನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದನೆ ನೀಡುವಂತೆ ಕೋರಿದರು. |
| ತೀರ್ಮಾನ | ದಿನಾಂಕ 07-09-2022ರಂದು ನಡೆದಂತಹ ಶಿಕ್ಷಣ ನಿಕಾಯದ ವಿಶೇಷ ಸಭೆಯ ನಡವಳಿಯನ್ನು ಸಭೆಯು ಅನುಮೋದಿಸಿತು. |
| III.6 | ದಿನಾಂಕ: 15-09-2022ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವಿಶೇಷ ಸಭೆಯ ನಡವಳಿಯ ಅನುಮೋದನೆ ಬಗ್ಗೆ. |
| | ಪ್ರೊ. ಹೆಚ್. ಟಿ. ಬಸವರಾಜಪ್ಪ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರು ಮಾತನಾಡಿ ದಿನಾಂಕ:15-09-2022 ರಂದು ನಡೆದಂತಹ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವಿಶೇಷ ಸಭೆಯು ಎನ್.ಇ.ಪಿ, ಪಠ್ಯಕ್ರಮಗಳಿಗೆ (ಜೀವ ರಸಾಯನಶಾಸ್ತ್ರ ವಿಷಯವನ್ನು) ಹೊರತುಪಡಿಸಿ, ಶಿಫಾರಸು ಮಾಡಿರುವುದನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದನೆ ನೀಡುವಂತೆ ಕೋರಿದರು. |
| ತೀರ್ಮಾನ | ದಿನಾಂಕ: 15-09-2022ರಂದು ನಡೆದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವಿಶೇಷ ಸಭೆಯ ನಡವಳಿಯಲ್ಲಿ ಜೀವ ರಸಾಯನಶಾಸ್ತ್ರ ವಿಷಯವನ್ನು ಹೊರತುಪಡಿಸಿ ಎಂದು ದಾಖಲಿಸಿರುವುದನ್ನು ಸಭೆಯು ಗಮನಿಸಿ ವಿಧ್ಯಾರ್ಥಿಗಳ ಹಿತದೃಷ್ಟಿಯಿಂದ ಈ ವಿಷಯವನ್ನು ಒಳಗೊಂಡಂತೆ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವಿಶೇಷ ಸಭೆಯ ನಡವಳಿಯನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |
| III.7 | Specialized ಕೋರ್ಸ್‌ಗಳ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವಿಶೇಷ ಸಭೆಯ ಶಿಫಾರಸು ನಿರ್ಣಯಗಳ ಬಗ್ಗೆ. |
| ತೀರ್ಮಾನ | Specialized ಕೋರ್ಸ್‌ಗಳ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ವಿಶೇಷ ಸಭೆಯ ಶಿಫಾರಸು ನಿರ್ಣಯಗಳನ್ನು ಸಭೆಯು ಅನುಮೋದಿಸಿತು. |
| III.8 | ದಿನಾಂಕ: 20-09-2022ರಂದು ನಡೆದಂತಹ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯದ ವಿಶೇಷ ಸಭೆಯ ನಡವಳಿಯ ಅನುಮೋದನೆ ಬಗ್ಗೆ. |
| | ಪ್ರೊ. ಬಿ. ಶಂಕರ್, ಡೀನರು, ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯ ಇವರು ಮಾತನಾಡಿ ದಿನಾಂಕ:20-09-2022ರಂದು ಮಧ್ಯಾಹ್ನ ನಡೆದಂತಹ ಇಂಜಿನಿಯರಿಂಗ್ ನಿಕಾಯದ ವಿಶೇಷ ಸಭೆಯು ಎನ್.ಇ.ಪಿ ಪಠ್ಯಕ್ರಮಗಳ ಶಿಫಾರಸುಗಳನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದನೆ ನೀಡುವಂತೆ ಕೋರಿದರು. |
| ತೀರ್ಮಾನ | ದಿನಾಂಕ: 20-09-2022ರಂದು ನಡೆದಂತಹ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯದ ವಿಶೇಷ ಸಭೆಯ ನಡವಳಿಯನ್ನು ಸಭೆಯು ಅನುಮೋದಿಸಿತು. |

<u>ಇತರೆ ವಿಷಯಗಳು:</u>

1. ಪ್ರೊ.ರಾಜಶೇಖರ್, ಸಂಯೋಜಕರು, ಕೆ.ಸೆಟ್, ಇವರು ಮಾತನಾಡಿ ಮುಂದಿನ ಕೆ.ಸೆಟ್ ಪರೀಕ್ಷೆಯನ್ನು ಡಿಸೆಂಬರ್‌ನಲ್ಲಿ ನಡೆಸಲಾಗುವುದು ಹಾಗೂ ಫಲಿತಾಂಶವನ್ನು ಮಾರ್ಚ್‌ನಲ್ಲಿ ಪ್ರಕಟಿಸುವುದಾಗಿ ತಿಳಿಸಿದರು.

2. ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆ ಪಡೆದ ಕೇಂದ್ರಗಳು ಸಮರ್ಪಕವಾಗಿ ಸಂಶೋಧನಾ ಚಟುವಟಿಕೆ ನಿರ್ವಹಿಸದೆ ಇರುವ ಕೇಂದ್ರಗಳನ್ನು ರದ್ದು ಪಡಿಸಿ ಸಂಯೋಜನೆಯನ್ನು ಹಿಂಪಡೆಯಲು ಸಭೆಯು ತೀರ್ಮಾನಿಸಿತು.

3. ಪ್ರೊ. ಸರಸ್ವತಿ, ಗ್ರಂಥಪಾಲಕರು ಮಾತನಾಡಿ 2022-23ನೇ ಸಾಲಿನ ಬಜೆಟ್‌ನಲ್ಲಿ ಗ್ರಂಥಾಲಯಕ್ಕೆ ನಿಗದಿ ಪಡಿಸಿದ ಹಣವನ್ನು ಉಪಯೋಗಿಸಿಕೊಳ್ಳಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು ಹಾಗೂ ಪ್ರತಿ ವರ್ಷ softwareಗಳನ್ನು ನವೀಕರಿಸಬೇಕಾಗಿರುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಮತ್ತೊಮ್ಮೆ ಪ್ರಸ್ತಾವನೆಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಸೂಚಿಸಿದರು ಹಾಗೂ Plagiarismಗೆ ಸಂಬಂಧಿಸಿದಂತೆ ಇನ್ನು ಮುಂದೆ turn-it-in software ನ್ನೇ ಬಳಕೆ ಮಾಡಬೇಕು ಮತ್ತು ಅದರ ಖರ್ಚನ್ನು ಮೈಸೂರು ವಿಶ್ವವಿದ್ಯಾನಿಲಯವು ಭರಿಸುವುದಾಗಿ ಸಭೆಗೆ ತಿಳಿಸಿದರು.

ಅಂತಿಮವಾಗಿ, ಕುಲಸಚಿವರು ಸಭೆಯಲ್ಲಿ ಸಲಹೆ ಸೂಚನೆಗಳನ್ನು ನೀಡಿದಂತಹ ಎಲ್ಲಾ ಶಿಕ್ಷಣ ಮಂಡಳಿ ಸದಸ್ಯರುಗಳಿಗೆ ಹಾಗೂ ಅಧಿಕಾರಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| **ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ** | **ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು** |